**ಶ್ರೀ ಸಿದ್ದರಾಮಯ್ಯ** (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಸರ್ಕಾರ ಖಾತರಿಗಳ ಮೇಲಿನ ಮಿತಿ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

**ಅಧ್ಯಕ್ಷರು** : ಪ್ರಸ್ತಾವ ಏನೆಂದರೆ ;

" 1999ರ ಕರ್ನಾಟಕ ಸರ್ಕಾರ ಖಾತರಿಗಳ ಮೇಲಿನ ಮಿತಿ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

*ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.*

**ಶ್ರೀ ಸಿದ್ದರಾಮಯ್ಯ** (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ 1999 ರ ಕರ್ನಾಟಕ ಸರ್ಕಾರ ಖಾತರಿಗಳ ಮೇಲಿನ ಮಿತಿ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ

**ಅಧ್ಯಕ್ಷರು** : * ವಿಧೇಯಕವನ್ನು ಮಂಡಿಸಲಾಗಿದೆ.*

1.50 ಪಿ.ಎಂ.

**ಶ್ರೀ ಸಿದ್ದರಾಮಯ್ಯ** (ಉಪ ಮುಖ್ಯಮಂತ್ರಿಗಳು) : ಅಧ್ಯಕ್ಷರೆ, ಸರ್ಕಾರಕ್ಕೆ ಗ್ಯಾರಂಟಿ ಕೊಡುವುದರ ಮೇಲೆ ಒಂದು ಮಿತಿ ಇರಬೇಕು ಎಂದು ಮಾಡಿದ್ದೇವೆ. ಇದರ ಪ್ರಕಾರ ರೆವಿನ್ಯೂ ರೆಸೀಟ್ಸ್ ಎಷ್ಟು ಇರುತ್ತದೆ ಅದರಲ್ಲಿ ಶೇಕಡ 80ಕ್ಕಿಂತ ಹೆಚ್ಚು ಹೋಗಬಾರದು. ಒಂದು ವೇಳೆ ಹೋಗಬೇಕಾದರೆ ಅದು ಲೆಜಿಸ್ಲೇಚರ್‌ಗೆ ಬರಬೇಕು. ಲೆಜಿಸ್ಲೇಚರ್‌ಗೆ ಕೊಟ್ಟರೆ ಮಾತ್ರ ಪವರ್ ಇರುತ್ತದೆ ಮತ್ತು ಸರ್ಕಾರದ ಮೇಲೆ ಆರ್ಥಿಕ ಶಿಸ್ತು ಬರುತ್ತದೆಂದು ಈ ಒಂದು ವಿಧೇಯಕವನ್ನು ತಂದಿದ್ದೇವೆ. ಇದು ಬಹಳ ಸರಳವಾಗಿರತಕ್ಕಂಥ ವಿಧೇಯಕ. ಇದಕ್ಕೆ ತಾವು ಎಲ್ಲರೂ ಒಪ್ಪಿಗೆ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ...

*ಪರ್ಯಾಲೋಚನ ಪ್ರಸ್ತಾವ*

**ಶ್ರೀ ಸಿದ್ದರಾಮಯ್ಯ** (ಉಪ ಮುಖ್ಯಮಂತ್ರಿಗಳು) : ಅಧ್ಯಕ್ಷರೆ, 1999ರ ಕರ್ನಾಟಕ ಸರ್ಕಾರ ಖಾತರಿಗಳ ಮೇಲಿನ ಮಿತಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

*ಪ್ರಸ್ತಾವನ್ನು ಮಂಡಿಸಲಾಯಿತು*

**ಅಧ್ಯಕ್ಷರು** : ಪ್ರಸ್ತಾವ ಏನೆಂದರೆ

"1999ರ ಕರ್ನಾಟಕ ಸರ್ಕಾರ ಖಾತರಿಗಳ ಮೇಲಿನ ಮಿತಿ ವಿಧೇಯಕವನ್ನು ಪರ್ಯಾಲೋಚಿಸುವುದು."

*ಪ್ರಸ್ತಾವ ಅಂಗೀಕರಿಸಲ್ಪಟ್ಟಿತು*

* ಸಹಬಂಧ I

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 6 ರವರೆಗೆ

**ಅಧ್ಯಕ್ಷರು :** ಖಂಡ 2 ರಿಂದ 6 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

*ಪ್ರಸ್ತಾವ ಅಂಗೀಕರಿಸಲ್ಪಟ್ಟಿತು*

ಖಂಡ 2 ರಿಂದ 6ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು

ಖಂಡ 1 ಇತ್ಯಾದಿ

**ಅಧ್ಯಕ್ಷರು :** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

*ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.*

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

*ಪ್ರಸ್ತಾವದ ಅಂಗೀಕಾರ*

**ಶ್ರೀ ಸಿದ್ದರಾಮಯ್ಯ** (ಉಪಮುಖ್ಯಮಂತ್ರಿಗಳು ) : ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಸರ್ಕಾರ ಖಾತರಿಗಳ ಮೇಲಿನ ಮಿತಿ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಅಧ್ಯಕ್ಷರು :** ಪ್ರಸ್ತಾವ ಏನೆಂದರೆ,

"1999ರ ಕರ್ನಾಟಕ ಸರ್ಕಾರ ಖಾತರಿಗಳ ಮೇಲಿನ ಮಿತಿ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

*ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು*

## 4. ಶಾಸನಾತ್ಮಕ ನಿರ್ಣಯ

**ವಿಷಯ :** ಕರ್ನಾಟಕ ರಾಜ್ಯದ ಸರ್ಕಾರಿ ವೈದ್ಯರ, ಇಎಸ್‌ಐ, ಆಸ್ಪತ್ರೆಗಳ ವೈದ್ಯರ ಹಾಗೂ ಸಿಬ್ಬಂದಿ ವರ್ಗದ ಸ್ಯಾನಿಟೇಷನ್, ಮುನಿಸಿಪಲ್ ಸೇವೆಗಳು ಹಾಗೂ ವಾರ್ಡ್‌ನ್‌ಗಳು, ಅಡಿಗೆಯವರು ಮತ್ತು ಅಡಿಗೆ ಮನೆ ಸಿಬ್ಬಂದಿ ಮತ್ತು ಗ್ರೂಪ್ "ಡಿ" ನೌಕರರ ಸೇವೆಗಳನ್ನು ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ಅಧಿನಿಯಮ 1994ರ ಅಡಿಯಲ್ಲಿ ತರುವುದು.

**ಶ್ರೀ ಟಿ.ಜಿ.ಆರ್. ಸಿಂಧ್ಯ**(ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ನಿರ್ಣಯವನ್ನು ತಮ್ಮ ಅನುಮತಿ ಕೋರಿ ಸಭೆಯ ಮುಂದೆ ಮಂಡಿಸುತ್ತೇನೆ.

"ಕರ್ನಾಟಕ ರಾಜ್ಯದ ಸರ್ಕಾರಿ ವೈದ್ಯರ, ಇಎಸ್‌ಐ, ಆಸ್ಪತ್ರೆಗಳ ವೈದ್ಯರ ಹಾಗೂ ಸಿಬ್ಬಂದಿ